# ಅನ್ವೇಷಣೆಗಳ ನಡುವಿನ ರುಕ್ಮಿಣಿ



‘ಕಲಾವಿದರ ಒಳಗೆ ಸದಾ ಭಯವೊಂದು ಇದ್ದೇ ಇರುತ್ತದೆ. ಆದರೆ ನನಗೆ ಸಿಗುತ್ತಿರುವ ಅವಕಾಶಗಳ ವಿಷಯದಲ್ಲಿ ನಿರಂತರತೆ ಕಾಣುತ್ತಿದೆ. ನಾನು ಮಾಡಲು ಬಯಸಿದ್ದ ಕೆಲಸಗಳು, ಪಾತ್ರಗಳೇ ನನ್ನ ದಾರಿಯಲ್ಲಿ ಬರುತ್ತಿವೆ. ಪಾತ್ರಗಳನ್ನು ವಿನ್ಯಾಸಗೊಳಿಸುವುದಕ್ಕಿಂತ ಆ ಪಾತ್ರದೊಳಗೆ ಜೀವಂತವಾಗಿರುವಂಥ ಅವಕಾಶಗಳು ನನಗೆ ಸಿಗುತ್ತಿವೆ. ಕಲಾವಿದೆಯಾಗಿ ಅನ್ವೇಷಣೆಗಳು ಎಂದಿಗೂ ನನಗೆ ಅಗತ್ಯವಿದೆ’ ಎಂದು ಮಾತನಾಡಿದ್ದಾರೆ ನಟಿ ರುಕ್ಮಿಣಿ ವಸಂತ್.

ಈಚೆಗೆ ‘ಟಾಕ್ಸಿಕ್’ ಸಿನಿಮಾದ ನಟಿ ರುಕ್ಮಿಣಿ ವಸಂತ್ ಅವರ ಫಸ್ಟ್ ಲುಕ್ ಬಿಡುಗಡೆಯಾಗಿದ್ದು, ಸಿನಿಮಾ ಕುರಿತು ನಿರೀಕ್ಷೆಗಳು ಹೆಚ್ಚಾಗಲು ಇದೂ ಒಂದು ಕಾರಣವಾಗಿದೆ. ಸಿನಿಮಾದಲ್ಲಿ ಮೆಲಿಸಾ ಆಗಿ ರುಕ್ಮಿಣಿ ಕಾಣಿಸಿಕೊಳ್ಳುತ್ತಿದ್ದಾರೆ.

ತಮ್ಮ ಕರಿಯರ್‌ನಲ್ಲಿ ಅತ್ಯುತ್ತಮ ಅವಕಾಶ ಇದಾಗಿದ್ದು, ತಮ್ಮಲ್ಲಿ ನಂಬಿಕೆಯಿಟ್ಟು ಈ ಪಾತ್ರ ಕೊಟ್ಟಿರುವುದಕ್ಕಾಗಿ ರುಕ್ಮಿಣಿ ಚಿತ್ರತಂಡಕ್ಕೆ ಧನ್ಯವಾದ ಸಲ್ಲಿಸಿದ್ದಾರೆ. ತಮಗೆ ಸಿಗುತ್ತಿರುವ ಸಿನಿಮಾ ಅವಕಾಶಗಳ ಕುರಿತು ಮಾತನಾಡಿರುವ ಅವರು, ‘ದೊಡ್ಡ ಬ್ಯಾನರ್‌ನ ಚಿತ್ರಗಳಲ್ಲಿ ತೊಡಗಿಕೊಂಡಾಕ್ಷಣ, ನಾವು ಬರೀ ದೊಡ್ಡ ಬ್ಯಾನರ್‌ನ ಸಿನಿಮಾಗಳನ್ನೇ ಮಾಡುವುದು ಎಂದು ಊಹಿಸಿಕೊಳ್ಳುತ್ತಾರೆ. ದೊಡ್ಡ ಬ್ಯಾನರ್ ಸಿನಿಮಾಗಳು ನಮ್ಮನ್ನು ಹೆಚ್ಚು ಜನರಿಗೆ ತಲುಪಿಸಬಹುದು. ಆದರೆ ಚಿಕ್ಕ ಬಜೆಟ್‌ನ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುವ ಖುಷಿ ವರ್ಣನೆಗೆ ನಿಲುಕದ್ದು. ನನಗೆ ಎರಡೂ ರೀತಿಯ ಅವಕಾಶಗಳು ದೊರೆಯುತ್ತಿವೆ. ಒಂದೇ ಪ್ರಕಾರಕ್ಕೆ ನನ್ನನ್ನು ನಾನು ಸೀಮಿತಗೊಳಿಸಿಕೊಳ್ಳುವುದಿಲ್ಲ’ ಎಂದು ವಿವರಿಸಿದ್ದಾರೆ.

# ಕೌಟುಂಬಿಕ ಕಥೆಗಳ ಒಲವಿನಲ್ಲಿ ಝೈದ್ ಖಾನ್



‘ಒಂದೇ ಜಾನರ್ ಸಿನಿಮಾಗಳನ್ನು ಮಾಡುವುದು ನನಗಿಷ್ಟವಿಲ್ಲ. ಬೇರೆ ಬೇರೆ ರೀತಿಯ ಕಥೆಗಳಲ್ಲಿ ತೊಡಗಿಕೊಳ್ಳುವ ಹಂಬಲವಿದೆ. ಕನ್ನಡದಲ್ಲಿ ಕುಟುಂಬಸಹಿತ ಕುಳಿತು ನೋಡುವಂಥ ಸಿನಿಮಾಗಳ ಕೊರತೆಯಿದೆ. ಆ ಜಾಗವನ್ನು ನಾನು ತುಂಬಬೇಕೆನ್ನುವ ಆಸೆಯಿದೆ’ ಎಂದಿದ್ದಾರೆ ನಟ ಝೈದ್ ಖಾನ್.

‘ಬನಾರಸ್’ ಸಿನಿಮಾ ಮೂಲಕ ಕನ್ನಡ ಸಿನಿಮಾರಂಗಕ್ಕೆ ಕಾಲಿಟ್ಟಿದ್ದ ನಟ ಝೈದ್ ಖಾನ್ ಅಭಿನಯದ ಮತ್ತೊಂದು ಸಿನಿಮಾ ‘ಕಲ್ಟ್’ ಇದೇ ಜನವರಿ 23ಕ್ಕೆ ಬಿಡುಗಡೆಯಾಗುತ್ತಿದೆ. ‘ಕಲ್ಟ್’ನಲ್ಲಿ ಝೈದ್, ಮೂರು ಶೇಡ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ.

‘ಮಾಧವ’ ಎನ್ನುವ ಪಾತ್ರದಲ್ಲಿ ಝೈದ್ ಕಾಣಿಸಿಕೊಳ್ಳುತ್ತಿದ್ದು, ವ್ಯಕ್ತಿತ್ವ, ದೇಹ, ಧ್ವನಿ ಈ ಮೂರು ಅಂಶಗಳಲ್ಲೂ ಬದಲಾಗುವಂಥ ಮೂರು ಶೇಡ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

‘ಕಲ್ಟ್’ ಸಿನಿಮಾಗೆ ಸ್ವತಃ ಝೈದ್ ಡಬ್ಬಿಂಗ್ ಮಾಡಿರುವುದು ಮತ್ತೊಂದು ವಿಶೇಷ. ‘‘ಈಗ ಸ್ಪಷ್ಟವಾಗಿ ಕನ್ನಡ ಮಾತನಾಡುವುದನ್ನು ಕಲಿತಿದ್ದೇನೆ. ಚಿತ್ರರಂಗದಲ್ಲಿ ಉಳಿದುಕೊಳ್ಳಲು ಭಾಷೆ ಬಹಳ ಮುಖ್ಯ. ‘ಕಲ್ಟ್’ನ ಪಾತ್ರಕ್ಕೆ ನಾನೇ ಡಬ್ಬಿಂಗ್ ಮಾಡಿದ್ದೇನೆ’’ ಎಂದು ಖುಷಿಯಿಂದ ಹೇಳಿಕೊಂಡಿದ್ದಾರೆ ಅವರು.

‘ಬನಾರಸ್’ ಬಳಿಕ ಹಿಂದಿಯಿಂದ ಹಲವು ವೆಬ್‌ಸರಣಿ, ಸಿನಿಮಾಗಳ ಆಫರ್‌ಗಳು ಝೈದ್ ಅವರನ್ನು ಅರಸಿ ಬಂದಿವೆ. ಕನ್ನಡದ ಒಲವು ಇಟ್ಟುಕೊಂಡಿರುವ ಅವರು, ಕನ್ನಡ ಹಾಗೂ ಹಿಂದಿಯಲ್ಲಿ ಸಿನಿಮಾ ಮಾಡುವುದಿದ್ದರೆ ಒಪ್ಪಿಕೊಳ್ಳುತ್ತೇನೆ ಎನ್ನುತ್ತಾರೆ. ಮಲಯಾಳ ಚಿತ್ರರಂಗದಿಂದಲೂ ತಮ್ಮನ್ನು ಅವಕಾಶಗಳು ಹುಡುಕಿ ಬಂದಿರುವುದಾಗಿ ಮಾಹಿತಿ ನೀಡುತ್ತಾರೆ.